## ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ, ನ್ಯಾಯಾಲಯ, ಬ್ಯಾಡಗಿ.

**ಸಿಸಿ. ನಂ.184/2023**

ದೂರುದಾರರುಃ

ಕರ್ನಾಟಕ ರಾಜ್ಯ , ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ

ವಿರುದ್ಧ

ಆರೋಪಿತಃ

ಮುರಡನಗೌಡ ತಂದೆ ಮುದಕನಗೌಡ ಪಾಟೀಲ, ವಯಾಃ 60 ವರ್ಷ
ಉಃ ಶೇತ್ಕಿರಿ, ಸಾಃ ಗುಮ್ಮನಹಳ್ಳಿ, ತಾಃ ಬ್ಯಾಡಗಿ, ಜಿಃ ಹಾವೇರಿ.

## ದೋಷಾರೋಪಣೆ

ನಾನು ಸುರೇಶ ವಗ್ಗನವರ, ಎಂ. ಎ. ಎಲ್. ಎಲ್. ಬಿ. ಸ್ಪೇಷಲ್, ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೇಂದರೆಃ

ಬ್ಯಾಡಗಿ ಪೊಲೀಸ್ ಠಾಣಾ ವ್ಯಾಪ್ತಿಯ ಗುಮ್ಮನಹಳ್ಳಿ ಹದ್ದಿಯಲ್ಲಿ ಆರೋಪಿತನಾದ ನೀವು ಕಳೆದ 2 ತಿಂಗಳ ಹಿಂದೆ ಮೃತನ ಅಣ್ಣನ ಮನೆಗೆ ಹೋಗಿ ಮೃತನ ಅತ್ತಿಗೆ ನಿರ್ಮಲಾ ಇವರ ಜೊಸೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಈ ಬಗ್ಗೆ ತಂಟೆ ತಕರಾರು ಆಗಿದ್ದು, ಆಗ ಊರಿನ ಹಿರಿಯರು ಪಂಚಾಯತಿ ಮಾಡಿ, ಆರೋಪಿತನಾದ ನಿಮಗೆ ಮೃತನ ಅಣ್ಣನ ಮನೆಗೆ ಹೋಗಿ ತೊಂದರೆ ಕೊಡದಂತೆ ತಾಕೀತು ಮಾಡಿ ಬುದ್ದಿವಾದ ಹೇಳಿದ್ದರು. ಆದರೂ ಕೂಡಾ ಆರೋಪಿತನಾದ ನೀವು ನಿಮ್ಮ ವರಸೆಯನ್ನು ಮುಂದುವರೆಸಿಕೊಂಡು ಬಂದಿದ್ದು, ಆಗ ಮೃತನ ಅಣ್ಣ ಸುಭಾಸ ಎಂಬುವರು ಮಾನ ಮರ್ಯಾದಿಗೆ ಅಂಜಿ ದಿನಾಂಕಃ 04.05.2023 ರಂದು ಮನೆ ಬಿಟ್ಟು ಹೋಗಿದ್ದು, ಈ ಬಗ್ಗೆ ಕೇಸ ದಾಖಲಾಗಿದ್ದು ಇರುತ್ತದೆ. ಆರೋಪಿತನಾದ ನೀವು ಮತ್ತೆ ಪದೇ ಪದೇ ಮೃತನ ಅಣ್ಣನ ಮನೆಗೆ ಹೋಗಿ ಮೃತನ ಅತ್ತಿಗೆಗೆ ತೊಂದರೆ ಕೊಡುತ್ತಿದ್ದರಿಂದ ಇದಕ್ಕೆ ಮೃತನು ಆರೋಪಿತನಾದ ನಿಮಗೆ ಯಾಕೇ ನನ್ನ ಅಣ್ಣನ ಮನೆಗೆ ಬರುತ್ತೀಯಾ ನನ್ನ ಅತ್ತಿಗೆಗೆ ಯಾಕೇ ತೊಂದರೆ ಕೊಡುತ್ತೀಯಾ ಅಂತಾ ಕೇಳಿದಾಗ, ಆರೋಪಿತನಾದ ನೀವು ಮೃತನಿಗೆ ಅವಾಚ್ಯವಾಗಿ ಬೈಯ್ದಾಡಿದ

ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಮೃತನಿಗೆ ನೀನು ಯಾರು ನನ್ನ ಕೇಳಲಿಕ್ಕೆ ನನಗೆ ಏನಾದರೂ ಕೇಳಲು ಬಂದರೆ ನಿನಗೆ ಒಂದು ಗತಿ ಕಾಣಿಸಿ ಬಿಡುತ್ತೇನೆ ಅಂತಾ ಕಳೆದ 2 ತಿಂಗಳಿಂದ ಹೇಳುತ್ತಾ ಬಂದಿದ್ದನು, ಅಲ್ಲದೆ ನೀನು ಎಲ್ಲಿಯಾದರೂ ಸಿಕ್ಕರೆ ನಿನಗೆ ಮುಗಿಸಿ ಬಿಡುತ್ತೇನೆ ಅಂತಾ ಹೇಳುತ್ತಾ ಜೀವದ ಬೆದರಿಕೆ ಹಾಕುತ್ತಾ ಬಂದಿದ್ದನು. ಇದರಿಂದ ಮೃತನು ಬೇಜಾರು ಮಾಡಿಕೊಂಡು ಆರೋಪಿತನು ನನ್ನ ಜೀವಕ್ಕೆ ಏನಾದರು ತೊಂದರೆ ಮಾಡುತ್ತಾನೆ ಅಂತಾ ತನ್ನ ಮನೆಯವರ ಹತ್ತಿರ ಹೇಳುತ್ತಾ ಬಂದಿದ್ದು, ಆಗ ಮನೆಯವರು ಮೃತನಿಗೆ ಬುದ್ದಿವಾದ ಹೇಳಿದ್ದರು. ಆದರೂ ಕೂಡಾ ಮೃತನು ಮಾನಸಿಕ ಮಾಡಿಕೊಂಡು ಮದ್ಯ ಸೇವನೆ ಮಾಡುತ್ತಾ ಆರೋಪಿತನಾದ ನಿಮಗೆ ಹೆದರುತ್ತಾ ಇದ್ದನು. ಮೃತನಿಗೆ ಆರೋಪಿತನಾದ ನೀವು ಅವಾಚ್ಯವಾಗಿ ಬೈಯ್ದಾಡಿ, ಜೀವದ ಬೆದರಿಕೆ ಹಾಕಿದ್ದರಿಂದ ಆರೋಪಿತನು ಇನ್ನು ನನಗೆ ಏನಾದರು ಮಾಡಿ ಬಿಡುತ್ತಾನೆ ನಾನೇ ಸಾಯುವುದು ಒಳ್ಳೆಯದು ಅಂತಾ ವಿಚಾರ ಮಾಡಿ, ಮರ್ಯಾದಿಗೆ ಅಂಜಿ, ಮದ್ಯ ಸೇವನೆ ಮಾಡಿ ಮಾನಸಿಕ ಮಾಡಿಕೊಂಡು ದಿನಾಂಕಃ 12.05.2023 ರಂದು ಮಧ್ಯಾಹ್ನ 1.30 ರ ಸುಮಾರಿಗೆ ಗುಮ್ಮನಹಳ್ಳಿ ಗ್ರಾಮದಲ್ಲಿರುವ ನೀರಿನ ಹೊಂಡಕ್ಕೆ ಹಾರಿ ನೀರಿನಲ್ಲಿ ಮುಳುಗಿ ಉಸುರುಗಟ್ಟಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

(ಈ ಮೇಲಿನ ಅಪರಾಧಗಳು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ, ಅವು ನನ್ನಿಂದ ವಿಚಾರಣೆಯಾಗಲ್ಪಡುತ್ತವೆಂದು ತಿಳಿಯಬಯಸುತ್ತೇನೆ.)

ದಿನಾಂಕ: 25.01.2025

(ಸುರೇಶ ವಗ್ಗನವರ
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.

ಪ್ರಶ್ನೆ 1). ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರ : ಆರೋಪಿ

ಪ್ರಶ್ನೆ.2) ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?
ಉತ್ತರ : ಆರೋಪಿ

(ಈ ಮೇಲಿನ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಎಂದು ದೃಡಿಕರಿಸುತ್ತೇನೆ.)

Sd/-

ದಿನಾಂಕ: 25.01.2025

(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.